ತಾಯಿ ಕೂಡ ಸ್ಮಾರ್ಟ್ ಆಗಿ ಇರಬೇಕೆಂದು ಬಯಸುತ್ತಾರೆ. ನಮ್ಮ ಹಾಗೆ ಅವರು ಹೆದರು ಪುಕ್ಕಲರಲ್ಲ, "ನೀವು ಹೀಗೆ ಯಾವಾಗಲೂ ಬಿಳಿ ಸೀರೆಯನ್ನೇ ಏಕೆ ಉಡಬೇಕು?" ಎಂದು ಕೇಳುವ ಧೈರ್ಯ ನನಗೆ ಬರಲೇಇಲ್ಲ. ಏಕೆಂದರೆ ಅಮ್ಮನ ಹಣೆಯ ಮೇಲೆ ಒಡಮೂಡಿದ ಗೆರೆಗಳು, ಕೋಪದಿಂದ ಕೆಂಪಾಗಿರುತ್ತಿದ್ದ ಕಣ್ಣುಗಳು ನನ್ನ ಬಾಯಿ ಮುಚ್ಚಿಸಲು ಸಾಕಾಗುತ್ತಿದ್ದವು. ಬಹುಶಃ ಇಂತಹ ಕಠಿಣ ವರ್ತನೆ ಮನದೊಳಗಿನ ಹೊಯ್ದಾಟದ ಫಲವೂ ಇದ್ದಿರಬೇಕು. ಅದೂ ಅಲ್ಲದೆ ಯಾವುದಾದರೂ ಅಂಕೆ ಇಲ್ಲದ ಆಸೆ ಒಳಗಿನಿಂದ ಪುಟಿದೇಳಬಹುದೆಂಬ ಸಂಶಯವಿದ್ದಿರಬೇಕು. ಆದುದರಿಂದಲೇ ಆಕೆ ಹಳೆಯ ಸಂಪ್ರದಾಯಗಳಿಗೇ ಅಂಟಿಕೊಂಡಿರುತ್ತಿದ್ದಳು.

★★★

ಈಗ ನಾನು ಆಗಾಗ ಕಣ್ಣಿಗೆ ಕಾಡಿಗೆ ಹಚ್ಚಿಕೊಳ್ಳುತ್ತೇನೆ. ಪ್ರತಿದಿನ ಸ್ನಾನ ಮಾಡಿ ಬಟ್ಟೆ ಬದಲಾಯಿಸಲೇಬೇಕು. ಏಕೆಂದರೆ ಶಾಲೆಗೆ ಹೋಗಬೇಕಲ್ಲ!... ಅಮ್ಮ ಬೇಡವೇ ಬೇಡ ಎಂದಿದ್ದರೂ ನಾನು ಧೈರ್ಯ ಮಾಡಿ ನನ್ನ ಕೊಠಡಿಗೆ ಒಂದು ನಿಲುಗನ್ನಡಿ ಹಾಕಿಸಿಕೊಂಡಿದ್ದೇನೆ. ಈಗ ತಲೆಯಲ್ಲಿ ಅಲ್ಲಲ್ಲಿ ಬಿಳಿಕೂದಲು ಕಾಣಿಸುತ್ತಿವೆ. ಮುಖದ ಮೇಲೆ ವಯಸ್ಸು ತನ್ನ ಗುರುತನ್ನು ಮೂಡಿಸುತ್ತಿದೆ. ಆದರೆ ಸ್ವರ್ಣವರ್ಣದ ಕೂದಲಿನ, ಕಣ್ಣಿನಿಂದ ಬೆಳಕಿನ ಕಿರಣಗಳು ಹೊರಸೂಸುವ ಆ ರಾಜಕುಮಾರನ ನೆನಪು ಈಗಲೂ ಮನದ ಭಿತ್ತಿಯಲ್ಲಿ ಹಸುರಾಗಿದೆ. ಆದರೆ ಆತ ನಗುವ ಮೊದಲೇ ನಾನು ಗಾಬರಿಗೊಂಡು ಮುಚ್ಚಿದ ಕಣ್ಣನ್ನು ತೆರೆದುಬಿಡುತ್ತೇನೆ. ಏಕೆಂದರೆ ನನ್ನ ಉಡಿಯಲ್ಲಿ ಈಗ ಯಾವುದೇ ಹೂಗಳಿಗೆ ಜಾಗವಿಲ್ಲ. "ಮೇಡಂ... ಸರ್ ಕರೆಯುತ್ತಿದ್ದಾರೆ." ಜವಾನ ಬಂದು ಪ್ರಿನ್ಸಿಪಾಲರ ಆದೇಶವನ್ನು ಅರುಹಿದ. ನಾನು ಕ್ಲಾಸ್‌ನಾಯಕನಿಗೆ ತರಗತಿ ನೋಡಿಕೊಳ್ಳಲು ಹೇಳಿ ಆಫೀಸ್ ಕಡೆಗೆ ಹೊರಟೆ. ಅಪ್ಪಣೆ ಪಡೆದು ಕೋಣೆಯೊಳಗೆ ಪ್ರವೇಶಿಸಿದೆ. ಪ್ರಾಂಶುಪಾಲರ ಆಫೀಸಿಗೆ ನಾನು ಹೋದದ್ದು ಇದೇ ಮೊದಲಸಲ. ಅವರು ಗೋಡೆ ಕಡೆಗೆ ಮುಖ ಮಾಡಿ ಕಂಪ್ಯೂಟರ್‌ನಲ್ಲಿ ಬಿಸಿಯಾಗಿದ್ದರು.

"ಬನ್ನಿ, ಕುಳಿತುಕೊಳ್ಳಿ..."

"ಧನ್ಯವಾದ..."

ಅವರು ಕಾಲಿಂಗ್ ಬೆಲ್ ಬಟನ್ ಒತ್ತಿ ಜವಾನನಿಗೆ ಚಹಾ ತರಲು ಸೂಚಿಸಿ ಕುರ್ಚಿಯನ್ನು ನನ್ನತ್ತ ತಿರುಗಿಸಿದರು.

"ಸರ್, ಥ್ಯಾಂಕ್ಸ್. ನಾನು ಚಹಾ ಕುಡಿಯುವುದಿಲ್ಲ..." ಅವರನ್ನೂ ನೋಡದೆಯೇ ಮಂದ ಸ್ವರದಲ್ಲಿ ನಾನು ಹೇಳಿದೆ.

"ಶಾಲೆಯ ಎಲ್ಲಾ ಸ್ಟಾಫ್ ಹಾಗೂ ಮಕ್ಕಳು ನಿಮ್ಮ ಬಗ್ಗೆ ಪ್ರಶಂಸೆಯ ಮಾತನಾಡುತ್ತಾರೆ." ಧೈರ್ಯ ಮಾಡಿ ನಾನು ಮುಖವೆತ್ತಿ ಅವರ ಕಡೆ ದೃಷ್ಟಿ ಹರಿಸಿದೆ. ನನ್ನ ಉಸಿರು ಎದೆಯಲ್ಲಿಯೇ ನಿಂತಂತಾಯಿತು. ತಲೆ ತಿರುಗಲಾರಂಭಿಸಿತು. ಬೆವರ ಹನಿಗಳು ಬಟ್ಟೆಯನ್ನು ತೋಯಿಸತೊಡಗಿದವು. ಕೈಕಾಲುಗಳಲ್ಲಿ ನಡುಕ ಉಂಟಾಯಿತು. ಎದೆಬಡಿತ ಎಷ್ಟು ಜೋರಾಗಿತ್ತೆಂದರೆ ಅದರ ಶಬ್ದಕ್ಕೆ ಕಿವಿ ತಮಟೆಯೇ ಹರಿದುಹೋಗುವಂತಿತ್ತು. ಕುರ್ಚಿಯ ಹ್ಯಾಂಡಲ್‌ಗಳ ಮೇಲೆ ಗಟ್ಟಿಯಾಗಿ ಕೈಯೂರಿ ಶಕ್ತಿಯನ್ನೆಲ್ಲಾ ಒಂದುಗೂಡಿಸಿ ಎದ್ದು ತೂರಾಡುತ್ತಲೇ ಹೆಜ್ಜೆ ಹಾಕುತ್ತಾ ಆಫೀಸಿನಿಂದ ಹೊರಗೆ ಬಂದುಬಿಟ್ಟೆ.

ಒಂದೇ ಬಾರಿಗೆ ಇಪ್ಪತ್ತು ಮೂವತ್ತು ಮೆಟ್ಟಿಲುಗಳನ್ನು ದಡಬಡನೆ ಇಳಿದು ಸರಸರನೆ ಬಂದು ಕ್ಲಾಸ್‌ರೂಂನ ಕುರ್ಚಿಯಲ್ಲಿ ಮೈಚೆಲ್ಲಿದೆ. ಉಸಿರಾಟ ತಹಬದಿಗೆ ಬಂದ ನಂತರ ನಿಧಾನವಾಗಿ ಯೋಚಿಸಿದೆ... "ಇದು ಹೇಗೆ ಸಾಧ್ಯ? ಹಾ... ಹಾಂ... ಅದೇ ಆ ಅಪ್ಸರೆಯ ದೇಶದ ರಾಜಕುಮಾರ...